‘ಆಧುನಿಕ ಮಹಿಳೆ’ ಎನ್ನುವುದು ಟೊಳ್ಳು ಸಂಸ್ಕೃತಿ ರಕ್ಷಕರ ನಿಘಂಟಿಗೆ ಸೇರಿರುವ ಲೇಟೆಸ್ಟ್ ಬೈಗುಳ. ಕೆಲವು ವರ್ಷಗಳ ಕೆಳಗೆ ಈ ಯಾದಿಗೆ ‘ಬುದ್ಧಿಜೀವಿ’ ಪದವೂ ಸೇರಿಕೊಂಡಿತ್ತು. ಪೂರ್ವವಿರಲಿ ಪಶ್ಚಿಮವಿರಲಿ, ಹೆಣ್ಣಿನ ಚಲನವಲನಗಳ ಮೇಲೆ ಕಣ್ಣಿಟ್ಟು ಆಕೆಯನ್ನು ನಿಯಂತ್ರಿಸುವ ಗುಂಪು ಸದಾ ಸಕ್ರಿಯವಾಗಿದೆ.



ಹೆಣ್ಣು ಎಂದೂ ಇವರಿಗೆ ಸಹಯಾತ್ರಿ ಅಲ್ಲ. ಸಹವಾಸಿ ಅಲ್ಲ. ಹೆಣ್ಣೆಂದರೆ ಗಂಡಸರ ಅಗತ್ಯಗಳನ್ನು ಪೂರೈಸುತ್ತಾ, ಅವರ ಜಗತ್ತು ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕಾದವಳು. ಸಂಪ್ರದಾಯದ ಫಲಾನುಭವಿಗಳು ಗಂಡುಗಳಾದರೂ, ಅದರ ನೊಗ ಇರುವುದು ಹೆಣ್ಣಿನ ಮೇಲೆ.